

ಶ್ರೀ. ಪ.ವಿ.ವ.ಸಂ.ಸಾ



# ಜಿ.ಪಿ.ಪೋರವಾಲ ಕಲಾ, ವಾಣಿಜ್ಯ ಮತ್ತು ವ್ಹಿ.ವ್ಹಿ. ಸಾಲಿಮಠ ವಿಜ್ಞಾನ ಮಹಾವಿದ್ಯಾಲಯ

ಸಿಂದಗಿ - 586128

೨೦೨೨-೨೦೨೩

09/10

ತಾ॥ಸಿಂದಗಿ ಜಿಲ್ಲಾ॥ವಿಜಯಪುರ

## ಕನ್ನಡ ವಿಭಾಗ

## ವಿದ್ಯಾರ್ಥಿಯ ಪ್ರಾಯೋಜಿತ ಕಾರ್ಯ

## ಹಳೆಗನ್ನಡದ ಪ್ರಮುಖ ಕವಿಗಳು

ಮಾರ್ಗದರ್ಶಕರು
ಪ್ರೊ - ಪ್ರತಿಕಾ. ಎಮ್. ತಳವಾರ (ಎಂ.ಎ, ಎಂ.ಎಡ್)

ಇವರಿಂದ,
ಭಾಗಣ್ಣ ಜಿ. ಚಿಟಗಿ
B.A.I sem
Reg no : U15NB22A0258
ಸ್ಥಳ : ಮಂದೇವಾಲ
ತಾ॥ ಜೇವರ್ಗಿ ಜಿ॥ ಕಲಬುರಗಿ
7483375998

Co-ordinator IQAC
G. P. Porwal Arts, Comm. & V. V. Salimath
Science College, SINDGI-586128 Dt.Vijayapur

Principal,
G. P. Porwal Arts, Comm. &
V. V. Salimath Sc. College
SINDGI-586128. College Code: 5



S.P.V.V.S.S



## G.P.PORWAL ARTS, COMMERCE & V.V. SALIMATH SCIENCE COLLEGE

SINDAGI - 586128

2022-2023

Tq :Sindagi

Dist :Vijayapur

# Dept, of Kannada

## Student Project Works on

## Halekannadada Pramuka Kavigalu

**Guided By,**

*Prof - Pratika M. Talawar ( M.A. M.Ed )*

**Submitted By,**

Bhaganna Chitagi.
B.A. I sem
Reg No : U15NB22S0258
Village : Mandewal
Tq : Jewaragi Dist : Kalaburagi
Mob : 7483375998

# ಪರಿವಿಡಿ


* ಪೀಠಿಕೆ

* ಹಳೆಗನ್ನಡದ ಪ್ರಮುಖ ಕವಿಗಳು.

1. ಪಂಪ
2. ಪೊನ್ನ
3. ರನ್ನ
4. ಜನ್ನ
5. ನಾಗಚಂದ್ರ
6. 1ನೇ ನಾಗವರ್ಮ
7. ನಯಸೇನ.
8. ದುರ್ಗಸಿಂಹ.
9. ಆಂಡಯ್ಯ.

* ಉಪಸಂಹಾರ.

## ಪೀಠಿಕೆ :-

ಸಾಮಾನ್ಯವಾಗಿ ಕ್ರಿ.ಶ. 8 ನೇ ಶತಮಾನದಿಂದ 12 ನೇ ಶತಮಾನದ ವರೆಗೆ ಇರುವ ಕಾಲವನ್ನು ಹಳೆಗನ್ನಡದ ಕಾಲವೆಂದು ಕರೆಯಲಾಗುತ್ತದೆ. ಈ ಹಳೆಗನ್ನಡದ ಕವಿಗಳು ಸಾಹಿತ್ಯ ಕ್ಷೇತ್ರಕ್ಕೆ ಅಮೂಲ್ಯ ಕೊಡುಗೆಯನ್ನು ನೀಡಿದ್ದಾರೆ. ಹಳೆಗನ್ನಡದ ಕವಿಗಳಾದ ಪಂಪ, ಪೊನ್ನ, ರನ್ನ, ಜನ್ನ, ನಾಗಚಂದ್ರ, 1 ನೇ ನಾಗವರ್ಮ, ನಯಸೇನ, ದುರ್ಗಸಿಂಹರು ಪ್ರಮುಖರು ಎನಿಸಿದ್ದಾರೆ. ಇವರ ಜೀವನ ಮತ್ತು ಸಾಹಿತ್ಯಿಕ ಕೃತಿಗಳು ಈ ಕೆಳಗಿನಂತಿವೆ.

# ಆದಿಕವಿ ಪಂಪ :-

ಜನನ :- ಕ್ರಿ.ಶ. ೯೦೨ ದುಂದುಭಿ ಸಂವತ್ಸರ

ತಂದೆ :- ಭೀಮಪ್ಪಯ್ಯ

ತಾಯಿ :- ಅಬ್ಬಣಬ್ಬೆ

ಜನ್ಮಸ್ಥಳ :- ವೆಂಗಿಪಳು ಅಗ್ರಹಾರದಲ್ಲಿ


ಗುರು :- ದೇವೇಂದ್ರಮುನಿ

ವಿದ್ಯಾಭ್ಯಾಸ :- ಗಣಿತ, ವ್ಯಾಕರಣ, ಅಲಂಕಾರ, ಸಂಗೀತ ನಾಟ್ಯ, ವೇದ ಶಾಸ್ತ್ರವನ್ನು ಅಧ್ಯಯನ ಮಾಡಿದನು.

ಕೃತಿಗಳು :- ಪಂಪಭಾರತ, ಆದಿಪುರಾಣ.

ಬಿರುದುಗಳು :- "ಆದಿಕವಿ", "ಸಂಸಾರ ಸಾರೋದಯ"

ಆಶ್ರಯದಾತ :- ೨ನೇ ಅರಿಕೇಸರಿ.



Principal,
G. P. Porwal Arts, Comm &
V. V. Salimath Sc. College
SINDGI-586128. College Code: 52

① ಆದಿಪುರಾಣ :-

* ಆದಿಪುರಾಣ ಕೃತಿಯು ಮೊದಲನೇ ತೀರ್ಥಂಕರರಾದ ವೃಷಭನಾಥನ ಬಗ್ಗೆ ತಿಳಿಸುತ್ತದೆ.
* ಜಿನಸೇನಾಚಾರ್ಯರ ಪೂರ್ವಪುರಾಣ ಆಧಾರ ಗ್ರಂಥವಾಗಿದೆ.
* ಈ ಕೃತಿಯಲ್ಲಿ 16 ಆಶ್ವಾಸಗಳು ಮತ್ತು 1555 ಪದ್ಯಗಳು ಇವೆ.
* ಈ ಗ್ರಂಥದಲ್ಲಿ ವೃಷಭನಾಥನ ಮಕ್ಕಳಾದ ಭರತ ಮತ್ತು ಬಾಹುಬಲಿಗಳ ಪ್ರಸಂಗವು ಚಿತ್ರವಾಗಿದೆ.
* ಜೈನ ಧರ್ಮದ ವರ್ಣನೆಯ ಜೊತೆಗೆ ಸರ್ವಧರ್ಮ ಸಮನ್ವಯ ಮೆರೆದಿದ್ದಾನೆ.

② ವಿಕ್ರಮಾರ್ಜುನ ವಿಜಯ :-

* ಈ ಕೃತಿಯು ಪಂಪಭಾರತವೆಂದು ಪ್ರಸಿದ್ಧವಾಗಿದೆ.
* ಇದರಲ್ಲಿ ವ್ಯಾಸರಚಿತವಾದ ಮಹಾಭಾರತವನ್ನು ಕನ್ನಡಕ್ಕೆ ತಂದ ಕೀರ್ತಿ ಪಂಪನಿಗೆ ಸಲ್ಲುತ್ತದೆ.
* ಪಂಪಭಾರತದಲ್ಲಿ ಅರ್ಜುನನನ್ನು ಪ್ರಧಾನ ಭೂಮಿಕೆಯಲ್ಲಿ ನಿಲ್ಲಿಸಿ ತನ್ನ ದೊರೆ 'ಅರಿಕೇಸರಿಗೆ' ಹೋಲಿಸಿದ್ದಾನೆ.
* ಮಹಾಭಾರತದ ಕಾವ್ಯದ ವರ್ಣನೆಯ ಜೊತೆಗೆ ಪಂಪ ತನ್ನ ಕಾಲದ ಸಮಾಜದ ನಾಗರಿಕತೆ, ಸಂಪ್ರದಾಯ, ಸಂಸ್ಕೃತಿ ಹಾಗೂ ಜನ ಸಾಮಾನ್ಯರ ಜೀವನದ ಪೂರ್ಣ ಚಿತ್ರಿಸಿದ್ದಾನೆ

# ಪೊನ್ನ :-

ಜನನ :- ಕ್ರಿ.ಶ. 950.

ಜನ್ಮಸ್ಥಳ :- ಪುಂಗನೂರಿನ ವೆಂಗಿ ವಿಷಯಂ.

ಗುರುಗಳು :- ಇಂದ್ರನಂದಿ.


ಕೃತಿಗಳು :- ಶಾಂತಿಪುರಾಣ, ಭುವನೈಕ್ಯ ರಾಮಾಭ್ಯುದಯಂ.

ಬಿರುದುಗಳು :- ಉಭಯಕವಿ ಚಕ್ರವರ್ತಿ, ಕುರುಳ್ಗಳ ಸವಣ.

ಆಶ್ರಯದಾತ :- 2 ನೇ ಕೃಷ್ಣ.

ಲಭ್ಯವಿರದ ಕೃತಿ :- ಜಿನಾಕ್ಷರಮಾಲೆ, ಗತಪ್ರತ್ಯಾಗತ.

ರತ್ನತ್ರಯರು :- 'ಪಂಪ', 'ಪೊನ್ನ', 'ರನ್ನ'



Principal,
G. P. Porwal Arts, Comm &
V. V. Salimath Sc. College
...-586128. College Code: 52

① ಶಾಂತಿಪುರಾಣ :-

* ಇದಕ್ಕೆ 'ಪುರಾಣ ನಾಮ ಚೂಡಾಮಣಿ' ಎಂಬ ಮತ್ತೊಂದು ಹೆಸರು ಇದೆ.

* ಇದೊಂದು ಚಂಪೂ ಕಾವ್ಯವಾಗಿದ್ದು 12 ಆಶ್ವಾಸಗಳಿಂದ ರಚಿತವಾಗಿದೆ.

* ಈ ಕಾವ್ಯ 16 ನೆಯ ತೀರ್ಥಂಕರನಾದ ಶಾಂತಿನಾಥನ ಬಗ್ಗೆ ತಿಳಿಸುತ್ತದೆ.

* ಈ ಕಾವ್ಯದಲ್ಲಿ ಪೊನ್ನನ ವಿದ್ವತ್ತು, ಪ್ರತಿಭೆ, ಭಾಷೆ ಛಂದಸ್ಸುಗಳ ಮೇಲೆ ಇರುವ ಹಿಡಿತ ಎದ್ದು ಕಾಣುತ್ತದೆ.

* ಜೈನ ಧರ್ಮದ ತತ್ವಗಳನ್ನು ಕವಿ ಕಾವ್ಯದುದ್ದಕ್ಕೂ ಪ್ರತಿಪಾದಿಸಿದ್ದಾನೆ.

② ಭುವನೈಕ ರಾಮಾಭ್ಯುದಯ :-

* ಇದು 14 ಆಶ್ವಾಸಗಳುಳ್ಳ ಚಂಪೂ ಕಾವ್ಯವಾಗಿದೆ.

* ಈ ಗ್ರಂಥವು ಲಭ್ಯವಿಲ್ಲವಾದ್ದರಿಂದ ಇದರ ಕಥಾವಸ್ತು ಚಕ್ರವರ್ತಿ ಕೃಷ್ಣನ ಸಾಮಂತರಾಜ ಶಂಕರಗಂಡನ ಕುರಿತದ್ದಾಗಿದೆ.

* ರಾಜಾದಿತ್ಯನ ಮೇಲೆ ಮುಮ್ಮಡಿ ಕೃಷ್ಣ ತಕ್ಕೋಲದಲ್ಲಿ ವಿಜಯ ಸಾಧಿಸಿದ ಕಥೆಯೋ ಎಂಬುದು ಸ್ಪಷ್ಟವಾಗಿ ತಿಳಿದಿಲ್ಲ.

## ಕವಿ ಚಕ್ರವರ್ತಿ ರನ್ನ :-

ಜನನ :- ಕ್ರಿ.ಶ. 949.

ತಂದೆ :- ಜಿನವಲ್ಲಭೆ

ತಾಯಿ :- ಅಬ್ಬಲಬ್ಬೆ.


ಜನ್ಮಸ್ಥಳ :- ಬಾಗಲಕೋಟೆಯ ಮುಧೋಳ ತಾಲೂಕು.

ಗುರು :- ಅಜಿತಸೇನಾಚಾರ್ಯ.

ಕೃತಿಗಳು :- ಅಜಿತ ಪುರಾಣ, ಗದಾಯುದ್ಧ.

ಬಿರುದು :- ಕವಿರತ್ನ. ಕವಿ ಚಕ್ರವರ್ತಿ.

ಆಶ್ರಯದಾತ :- 2ನೇ ತೈಲಪ, ಸತ್ಯಾಶ್ರಯ.



## ① ಅಜಿತನಾಥಪುರಾಣ :-

* ಇದೊಂದು ಧಾರ್ಮಿಕ ಕಾವ್ಯವಾಗಿದೆ.
* 2ನೇ ತೀರ್ಥಂಕರನ ಕಥೆ ಇದರ ವಸ್ತು.
* ಇದನ್ನು 'ಪುರಾಣ ತಿಲಕ' ಎಂದು ಕವಿಯೇ ಹೇಳಿದ್ದಾನೆ.
* ಹನ್ನೆರಡು ಆಶ್ವಾಸಗಳಿದ್ದು, ಮೊದಲನೆಯ ಆಶ್ವಾಸ ಪೂರ್ಣವಾಗಿ ಆಶ್ರಯದಾತೆ ಅತ್ತಿಮಬ್ಬೆಯ ಚಿತ್ರಣಕ್ಕೆ ಮೀಸಲಾಗಿದೆ.
* ಗ್ರಂಥದ ಸವಿವತ್ತಾದ ಭಾಗಗಳೆಂದರೆ ಅತ್ತಿಮಬ್ಬೆ ಮತ್ತು ಸಾಗರಚಕ್ರವರ್ತಿ ಕಥೆಗಳ ಭಾಗಗಳೇ ಆಗಿವೆ.

## ② ಸಾಹಸಭೀಮ ವಿಜಯಂ (ಗದಾಯುದ್ಧ) :-

* ರನ್ನನ ಕೃತಿಗಳಲ್ಲಿ ಸಾಹಸಭೀಮ ವಿಜಯಂ ಮುಖ್ಯವಾದದ್ದು.
* ಇವನ ಲೌಕಿಕ ಕೃತಿಗಳಲ್ಲಿ ಉಪಲಬ್ಧವಿರುವಂಥದು ಇದೊಂದೇ.
* ಗದಾ ಸೌಪ್ತಿಕ ಪರ್ವಗಳ ಕಥೆಯೇ ಇದರ ವಸ್ತು.
* ಹತ್ತು ಆಶ್ವಾಸಗಳಲ್ಲಿ ಹರಡಿಕೊಂಡಿರುವ ಈ ಕಾವ್ಯದಲ್ಲಿ ಭೀಮ - ದುರ್ಯೋಧನರ ಗದಾಯುದ್ಧವೇ ಕೇಂದ್ರಬಿಂದು.
* ಕಥಾನಾಯಕ ಭೀಮನಾದರೂ ದುರ್ಯೋಧನನ ಪಾತ್ರವೇ ಹೆಚ್ಚು ಜೀವಂತವಾಗಿ ಚಿತ್ರಣಗೊಂಡಿದೆ.

## ಮಹಾಕವಿ ಜನ್ನ :-

ಜನನ :- ಕ್ರಿ.ಶ. 1150.

ತಂದೆ :- ಶಂಕರ.

ತಾಯಿ :- ಗಂಗಾದೇವಿ.


ಹೆಂಡತಿ :- ಲಕುಮಾದೇವಿ.

ಜನ್ಮಸ್ಥಳ :- ಸಿಂದಗಿ ತಾಲೂಕಿನ ಕೊಂಡಗುಳಿ.

ಗುರು :- ಮೂಲಸಂಘಗಣದ ಮೇಘನಂದಿ ಸಿದ್ಧಾಂತಿದೇವರು.

ಕೃತಿಗಳು :- ಯಶೋಧರ ಚರಿತೆ.
ಅನಂತನಾಥ ಪುರಾಣ.

ಆಶ್ರಯದಾತ :- ವೀರಬಲ್ಲಾಳ.



ಮಹಾಕವಿ ಜನ್ನ.

① ಯಶೋಧರ ಚರಿತೆ :-

* ಇದೊಂದು ಧಾರ್ಮಿಕ ಕಾವ್ಯವಾಗಿದೆ.
* ಯಶೋಧರ ಚರಿತೆ ಆಶ್ವಾಸದ ವಿಭಾಗಗಳು ಇಲ್ಲವಿಲ್ಲ.
* ಯಶೋಧರ ಚರಿತೆ ಬಹುಸುಂದರವಾದ ಒಂದು ಪುಟ್ಟ ಕಾವ್ಯವಾಗಿದೆ.
* ಕೇವಲ ನಾಲ್ಕು ಅವತಾರಗಳು 310 ಪದ್ಯಗಳು ಇದರಲ್ಲಿವೆ.
* ಈ ಕೃತಿಯ ವಿಶಿಷ್ಟತೆ ಇದಕ್ಕೆ ಮೂಲ ಸಂಸ್ಕೃತದಲ್ಲಿ ವಾದಿರಾಜ ಬರೆದಿರುವ ಯಶೋಧರ ಚರಿತೆ ಅದಕ್ಕಿಂತಲೂ ಹಿಂದೆ ಪ್ರಭಂಜನ ಹರಿಭದ್ರ, ಸೋಮದೇವ ಮುಂತಾದ ಪ್ರಾಕೃತ ಸಂಸ್ಕೃತ ಕವಿಗಳು ಯಶೋಧರನ ಕಥೆಯನ್ನು ನಿರೂಪಿಸಿದ್ದಾರೆ.

② ಅನಂತನಾಥ ಪುರಾಣ :-

* ಅನಂತನಾಥಪುರಾಣ 14 ನೆಯ ತೀರ್ಥಂಕರರಾದ ಅನಂತನಾಥನ ಕಥೆಯನ್ನು ಬಣ್ಣಿಸುವ ಕಥೆಯಾಗಿದೆ.
* 14 ಆಶ್ವಾಸಗಳ ಪ್ರೌಢ ಚಂಪೂ ಕಾವ್ಯ.
* ಇದಕ್ಕೆ ಮೂಲವಾದ ಆಕರ ಗುಣಭದ್ರಾಚಾರ್ಯರು ಸಂಸ್ಕೃತದಲ್ಲಿ ರಚಿಸಿರುವ ಉತ್ತರ ಪುರಾಣವಾಗಿದೆ.
* ಈ ಕಾವ್ಯ ಸಂಪ್ರದಾಯದ ಪ್ರಭಾವಕ್ಕೆ ವಿಶೇಷವಾಗಿ ಪಕ್ಕಾಗಿದೆ.

## ಅಭಿನವ ಪಂಪ ನಾಗಚಂದ್ರ :-

ಜನನ :- ಕ್ರಿ.ಶ. 1100

ಜನ್ಮಸ್ಥಳ :- ವಿಜಯಪುರ ಪ್ರಾಂತ್ಯ

ಗುರು :- ಬಾಲಚಂದ್ರ ಮೇಘಚಂದ್ರಯತಿಗಳು.

ಕೃತಿಗಳು :- ಮಲ್ಲಿನಾಥ ಪುರಾಣ. ರಾಮಚಂದ್ರ ಚರಿತ ಪುರಾಣ.

ಬಿರುದುಗಳು :- ಸಾಹಿತ್ಯ ವಿದ್ಯಾಧರ.

ಆಶ್ರಯದಾತ :- ಚಾಲುಕ್ಯರ ಬಲ್ಲಾಳ.



## ① ಮಲ್ಲಿನಾಥ ಪುರಾಣ :-

* ನಾಗಚಂದ್ರನ ಮೊದಲ ಜೈನ ಕಾವ್ಯವಾಗಿದೆ.
* ಜೈನರ 19 ನೇ ತೀರ್ಥಂಕರರಾದ ಮಲ್ಲಿನಾಥನ ಬಗ್ಗೆ ತಿಳಿಸುತ್ತದೆ.
* ಈ ಕಾವ್ಯವು 14 ಆಶ್ವಾಸಗಳಿಂದ ರಚಿತವಾಗಿದೆ.
* ಈ ಕಾವ್ಯಕ್ಕೆ ಮೂಲ ಆಕರ ಗ್ರಂಥವೆಂದರೆ ಗುಣಭದ್ರಾಚಾರ್ಯರ ಉತ್ತರಪುರಾಣ.
* ಮೊದಲ ಐದು ಆಶ್ವಾಸಗಳಲ್ಲಿ ಭೋಗಜೀವನದ ಚಿತ್ರಣ.
* ಕೊನೆಯ ಆರು ಆಶ್ವಾಸಗಳಲ್ಲಿ ತ್ಯಾಗ ವೈರಾಗ್ಯಗಳ ಚಿತ್ರಣವಿದೆ.

## ② ರಾಮಚಂದ್ರ ಚರಿತೆ ಪುರಾಣ :-

* ನಾಗಚಂದ್ರನ ರಾಮಚಂದ್ರಚರಿತೆ ಪುರಾಣಕ್ಕೆ ಮೂಲ ಆಕರ ಪ್ರಾಕೃತ ಭಾಷೆಯಲ್ಲಿರುವ ವಿಮಲ ಸೂರಿಯ 'ಪಉಮಚರಿಯ' ವಾಗಿದೆ.
* ಈ ಕೃತಿಯು 16 ಆಶ್ವಾಸಗಳನ್ನು ಒಳಗೊಂಡಿದೆ.
* ಇಡೀ ಕೃತಿಯಲ್ಲಿ ಜೈನವಾತಾವರಣ ಹರಡಿದೆ.
* ಇಲ್ಲಿ ಲಕ್ಷ್ಮಣನಿಗೆ ಪ್ರಾಧಾನ್ಯ ಕೊಡಲಾಗಿದೆ. ರಾವಣನನ್ನು ಕೊಲ್ಲುವವನು ಕೂಡಾ ಲಕ್ಷ್ಮಣ.

## ಒಂದನೇ ನಾಗವರ್ಮ :-



ಜನನ :- ಕ್ರಿ.ಶ. 10 ಅಥವಾ 11 ನೇ ಶತಮಾನ.

ತಂದೆ :- ವೆಣ್ಣಮಯ್ಯ

ತಾಯಿ :- ಪೋಲಕಬ್ಬೆ.


ಜನ್ಮಸ್ಥಳ :- ವೆಂಗಿಪಳು ಗ್ರಾಮದಲ್ಲಿ

ಗುರು :- ಅಜಿತಸೇನದೇವ.

ಕೃತಿಗಳು :- ಕರ್ನಾಟಕ ಕಾದಂಬರಿ, ಛಂದೋಂಬುಧಿ.

ಬಿರುದುಗಳು :- ಕವಿರಾಜಹಂಸ, ಕಂದಕಂದರ್ಪ.

ಆಶ್ರಯದಾತ :- ಬತೆಂಪ್ರ



Principal,
G. P. Porwal Arts, Comm &
V. V. Salimath Sc. College
... 586128 College Code: 5...

## ① ಕರ್ನಾಟಕ ಕಾದಂಬರಿ :-

* ಇದು ಒಂದು ಚಂಪೂ ಕಾವ್ಯವಾಗಿದೆ.
* ಛಂದೋಂಬುಧಿಯಿಂದ ತಿಳಿಯಬರುವ ಸಂಗತಿಗಳಿಗೂ ಕರ್ನಾಟಕ ಕಾದಂಬರಿಯಿಂದ ತಿಳಿಯಬರುವ ಸಂಗತಿಗಳಿಗೂ ಹೊಂದಾಣಿಕೆಯಿಲ್ಲ.
* ಕನ್ನಡದ ಉಪಲಬ್ಧವಿರುವ ಪ್ರಥಮ ಛಂದಶ್ಶಾಸ್ತ್ರ ಕೃತಿ.
* ಛಂದೋಂಬುಧಿಯು ಸಂಚಿಕೆಯೊಗಧಿಕಾರ ಅಚ್ಚಗನ್ನಡ ಛಂದಸ್ಸಿನ ದೃಷ್ಟಿಯಿಂದ ಅತ್ಯಂತ ಮಹತ್ವದ್ದು.
* ಇದರಲ್ಲಿ ಕರ್ನಾಟಕ ವಿಷಯ ಜಾತಿವೃತ್ತಗಳ ವಿವರಣೆ ಇದೆ

## ② ಕರ್ನಾಟಕ ಕಾದಂಬರಿ :-

* ಕರ್ನಾಟಕ ಕಾದಂಬರಿ ಸಂಸ್ಕೃತದಲ್ಲಿ ಬಾಣ ಮತ್ತು ಅವನ ಮಗ ಭೂಷಣನಿಂದ ರಚಿತವಾದ ಕಾದಂಬರಿ ಎಂಬ ಗದ್ಯಕಾವ್ಯದ ಪದ್ಯಾನುವಾದ.
* ಮಹಾಶ್ವೇತೆ, ಕಾದಂಬರಿ, ಪುಂಡರೀಕ, ಚಂದ್ರಾಪೀಡ ಈ ಕಾವ್ಯದ ಪ್ರಧಾನ ಪಾತ್ರಗಳು.
* ಕರ್ನಾಟಕ ಕಾದಂಬರಿ ಉಪಲಬ್ಧ ಕನ್ನಡ ಕಾವ್ಯಗಳಲ್ಲಿ ಮೊದಲನೆಯ ಭಾಷಾಂತರ ಹಾಗೂ ಪ್ರಪ್ರಥಮ ಶೃಂಗಾರಕಾವ್ಯವಾಗಿದೆ.

## ದುರ್ಗಸಿಂಹ :—

ಜನನ :- ಕ್ರಿ.ಶ. 1031

ತಂದೆ :- ಈಶ್ವರಾರ್ಯ

ತಾಯಿ :- ರೇವಕಬ್ಬೆ.


ಜನ್ಮಸ್ಥಳ :- ಕಿಸುಕಾಡು ನಾಡಿನ ಸಯ್ಯಡಿಯವನು.

ಗುರು :- ಶಂಕರಭಟ್ಟ.

ಕೃತಿಗಳು :- ಪಂಚತಂತ್ರ.

ಬಿರುದುಗಳು :-

ಆಶ್ರಯದಾತ :- ಒಂದನೆಯ ಜಗದೇಕಮಲ್ಲನ ದಂಡನಾಯಕ



ದುರ್ಗಸಿಂಹ

## ಪಂಚತಂತ್ರ :-

* ಪಂಚತಂತ್ರದಲ್ಲಿ, ಭೇದ, ಪರೀಕ್ಷೆ, ವಿಶ್ವಾಸ, ವಂಚನಾ ಮತ್ತು ಮಿತ್ರಕಾರ್ಯ ಎಂಬ ತಂತ್ರಗಳನ್ನು ಒಳಗೊಂಡಿದೆ.

* 48 ಉಪಕಥೆಗಳು, 457 ಪದ್ಯಗಳು, 230 ಶ್ಲೋಕಗಳಿಂದಲೂ ಕೂಡಿದೆ.

1> ಮೊದಲನೆ ತಂತ್ರ → ಭೇದ ಪ್ರಕರಣ

2> ಎರಡನೇ ತಂತ್ರ → ಪರೀಕ್ಷೆ ಪ್ರಕರಣ

3> ಮೂರನೇ ತಂತ್ರ → ವಿಶ್ವಾಸ ಪ್ರಕರಣ

4> ನಾಲ್ಕನೇ ತಂತ್ರ → ವಂಚನಾ ಪ್ರಕರಣ.

5> ಐದನೇ ತಂತ್ರ → ಮಿತ್ರಕಾರ್ಯ ಪ್ರಕರಣ

## ನಯಸೇನ :—


ಜನನ :— ಕ್ರಿ.ಶ. 1112

ಜನ್ಮಸ್ಥಳ :— ಧಾರವಾಡ ಜಿಲ್ಲೆಯ ಮುಳುಗುಂದ

ಗುರು :— ನರೇಂದ್ರ ಸೇನ ಮುನಿ.

ಕೃತಿಗಳು :— ಧರ್ಮಾಮೃತ - ಚಂಪೂ ಗ್ರಂಥ.

ಬಿರುದುಗಳು :— ದಿಗಂಬರದಾಸ, ಸೀಗತ್ರಕಲೀಲಾವಿಲಾಸ,
ಸುಕವಿನಿಕರ, ಪಿಕಮಾಕಂದ.



## ಧರ್ಮಾಮೃತ :-

* ಇದೊಂದು ಚಂಪೂ ಗ್ರಂಥವಾಗಿದೆ.
* ಇದು 14 ಆಶ್ವಾಸಗಳನ್ನು ಹೊಂದಿದೆ.
* ಜೈನ ಧರ್ಮ ಪ್ರಸಾರ, ಪರಮತ, ವಿಡಂಬನೆ - ಅಧಿಕವಾಗಿವೆ ವಿಡಂಬನಕಾರ ಎಂದು ಪ್ರಸಿದ್ಧ
* ನಾಣ್ಣುಡಿ ದೇಸಿವೆತ್ತಂ, ಸ್ವಾನ್ಯನುಡಿ ಮಾರ್ಗಂ-ಕನ್ನಡದ ಮಾರ್ಗ ಶೈಲಿಯನ್ನು ತಿರಸ್ಕರಿಸಿ ಶುದ್ಧ ದೇಸಿ ಶೈಲಿಯಲ್ಲಿ ಚಂಪೂ ಕಾವ್ಯವನ್ನು ಹೊರತಂದ ಕ್ರಾಂತಿಕಾರಿ.
* ನಯಸೇನನ ಈ ಗ್ರಂಥವು ಜೈನ ಮತಾಚಾರದಲ್ಲಿ ೧೪ ಮಹಾರತ್ನಗಳೆಂದು ಹೆಸರಾದ ಗುಣವ್ರತಗಳಲ್ಲಿ ಒಂದೊಂದನ್ನು ಆಚರಿಸಿ ಸದ್ಗತಿಯನ್ನೈದ ೧೪ ಮಹಾಪುರುಷರ ಕಥೆಗಳನ್ನು ನಿರೂಪಿಸಿದೆ.
* ಕನ್ನಡದಲ್ಲಿ ಕಾವ್ಯ ರಚನೆ ಸಮಯದಲ್ಲಿ ಸಂಸ್ಕೃತ ಶಬ್ದಗಳನ್ನು ಸೇರಿಸುವ ಬಗ್ಗೆ ನಯಸೇನನ ಆಕ್ಷೇಪ ಇದ್ದು "ಕನ್ನಡವೆಂಬ ತುಪ್ಪದಲ್ಲಿ ಸಂಸ್ಕೃತವೆಂಬ ಎಣ್ಣೆ ಬೆರೆಸಿ ಊಟ ಮಾಡಿದಂತಾಗುತ್ತದೆ" ಎಂದು ಅಭಿಪ್ರಾಯ ಪಟ್ಟಿದ್ದಾನೆ.

## ಆಂಡಯ್ಯ :-

ಜನನ :- 1217 ಕ್ರಿ.ಶ.

ಜನ್ಮಸ್ಥಳ :- ಬನವಾಸಿಯ ಪ್ರಾಂತ್ಯ.

ಕೃತಿ :- ಕಬ್ಬಿಗರ ಕಾವ್ಯ.

ಕೃತಿಯ ಮೂಲನಾಮ :- ಕಾವನಗೆಲ್ಲ

ಆಶ್ರಯದಾತ :- ಕದಂಬರ ಮಾಂಡಲಿಕನಾದ ಕಾಮದೇವ.

ಬಿರುದು :- ಅಚ್ಚ ಕನ್ನಡದ ಮೊಟ್ಟ ಮೊದಲ ಕವಿ.

## ಕಬ್ಬಿಗರ ಕಾವ್ಯಂ :-

* ಇದರ ಮೂಲನಾಮ ಕಾವನ ಗೆಲ್ಲ ಎಂದು, ಸೊಬಗಿನ ಸುಗ್ಗಿ ಎಂಬ ಮತ್ತೊಂದು ಹೆಸರಿರುವುದರಿಂದಾಗಿ ಕೆಲವು ವಿಮರ್ಶಕರು ಅಭಿಪ್ರಾಯ ಪಡುತ್ತಾರೆ. ಇದು ಚಂಪೂಕಾವ್ಯ ಇದರಲ್ಲಿ ನಡು ನಡುವೆ ಸಣ್ಣ ಸಣ್ಣ ಗದ್ಯ ಖಂಡಗಳ ಜೊತೆಗೆ ವೃತ್ತಗಳು ಕಂದಗಳು ಸೇರಿ ಒಟ್ಟು 272 ಪದ್ಯಗಳಿವೆ.

* ಈ ಕೃತಿಯು ಕಥಾವಸ್ತು ಸ್ಥೂಲವಾಗಿ ಹೀಗಿದೆ. "ಹೂವಿನ ಬಿಲ್ಲಿನ ನನೆಯಿಲ್ಲವೆಂಬ ದೊರೆ ಕನಸಿನಲ್ಲಿ ಕಂಡ ಅಪ್ಸರೆಯನ್ನೇ ಎಚ್ಚೆತ್ತು ಮನುಜರಲ್ಲಿ ಕಂಡಾಗ ಆಕೆ ಹೇಳಿದ ಕಥೆಯಿಂದ ತನ್ನ ನಿಜಸ್ಥಿತಿಯನ್ನು ಅರಿಯುತ್ತಾನೆ."

* ತದ್ಭವ ಪದಗಳನ್ನು ದೇಸೀ ನುಡಿಗಳನ್ನು ಒಳಗೊಂಡ ಕೃತಿಯಾಗಿದೆ.

* ಇದರಲ್ಲಿ ಶಿವ-ಮನ್ಮಥರ ಕಥೆ ಇದೆ.

* ಸ್ಮರತತ್ವ, ಶಿವತತ್ವ, ಜೀವತತ್ವಗಳು ಒಂದಕ್ಕಿಂತ ಒಂದು ಮಿಗಿಲು ಎಂದು ಹೇಳಿದ್ದಾರೆ.

* ಚೆಲುವರು ನೆಲ, ಕಾಂತಿನುಡಿ, ಒಳಂಬಾಧ್ಯವ, -ಈ ಮೂರನ್ನು ಕುರಿತು ಈ ಕೃತಿಯು ಬಲವು ಆಧಾರ.

## ಉಪಸಂಹಾರ :-

ಹೀಗೆ ಹಳೆಗನ್ನಡದ ಕವಿಗಳು ತಾವು ಬೆಳೆದು ಬಂದ ಪ್ರಕೃತಿ, ಸಾಂಸ್ಕೃತಿಕವಾಗಿ ಹಾಗೂ ಧಾರ್ಮಿಕವಾಗಿ ಮತ್ತು ತಮಗೆ ಆಶ್ರಯ ನೀಡಿದ ರಾಜನನ್ನು ಹೊಗಳಿ ಗ್ರಂಥಗಳನ್ನು ರಚಿಸಿದ್ದಾರೆ. ಹಳೆಗನ್ನಡದ ಕವಿಗಳು ತಮ್ಮ ಕಾಲದಲ್ಲಿ ಸಾಹಿತ್ಯದ ರಾಶಿಯನ್ನೆ ಸೃಷ್ಟಿ ಮಾಡಿದ್ದಾರೆ.

## ಉಲ್ಲೇಖ :-

ಈ ಎಲ್ಲಾ ವಿಷಯಗಳನ್ನು ನಾನು ಅಂತರ್ಜಾಲದ ಮೂಲಕ ಹಾಗೂ ಕನ್ನಡ ದೀವಿಗೆ ಎಂಬ App ನಿಂದ ಹಾಗೂ ಕೆಲವೊಂದು ಸ್ವಂತ ವಾಕ್ಯಗಳಲ್ಲಿ ಬಳಸಿಕೊಂಡು ಈ ಪತ್ರಿಕೆ ಕನ್ನಡದ ಯೋಜನಾ ಕಾರ್ಯವನ್ನು ಬರೆದಿದ್ದೇನೆ.

Co-ordinator IQAC
G. P. Porwal Arts, Comm & V. V. Salimath Science College, SINDGI-586128. Dt.Vijayapur

Principal.
G. P. Porwal Arts, Comm & V. V. Salimath Sc. College
SINDGI-586128. College Code: 523